**ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ಬೀಳಗಿ ರವರ ನ್ಯಾಯಾಲಯದಲ್ಲಿ**

**CC-123/2020** **CW-01, PW-02**

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಜು ಹೊಸಮನಿ |
| ವಯಸ್ಸು | : | 38 |
| ಉದ್ಯೋಗ | : | ಅಬಕಾರಿ ನಿರೀಕ್ಷಕರು, ಹುಕ್ಕೇರಿ |
| ವಾಸಸ್ಥಳ | : | ಹುಕ್ಕೇರಿ |

**ದಿನಾಂಕ 09–04–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

ದಿ–17–02–2017 ರಿಂದ ನವೆಂಬರ್ 2020 ರ ವರೆಗೆ ಬೀಳಗಿ ವಲಯದ ಅಬಕಾರಿ ಉಪ ನಿರೀಕ್ಷಕರಾಗಿ ಕೆಲಸ ಮಾಡಿದ್ದೇನೆ. ದಿನಾಂಕಃ 19–06–2019 ರಂದು ಬೆಳಿಗ್ಗೆ 07–30 ರ ಸಮಾರಿಗೆ ನನಗೆ ಮಾಹಿತಿ ಬಂದಿದ್ದು ಸುನಗ ತಾಂಡ–1 ರಲ್ಲಿ ಪೂರ್ವ ದಿಕ್ಕಿಗೆ ಮೊಖ ಮಾಡಿರುವ ಸೋಮು ಶಿವಪ್ಪ ಲಮಾಣಿ ಇವರಿಗೆ ಸೇರಿದ ಮನೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿಯನ್ನು ಮಾರಾಟ ಮಾಡಲು ಸಂಗ್ರಹಿಸಿರುವುದಾಗ ಖಚಿತ ಮಾಹಿತಿ ಬಂದ ಮೇರೆಗೆ ನಾನು ಚಾ.ಸಾ–4, 5 ರವರು ಸೇರಿಕೊಂಡು ನಮ್ಮ ಇಲಾಖಾ ವಾಹನದಲ್ಲಿ ದರ್ಗಾ ಕ್ರಾಸ್ ಮಾರ್ಗವಾಗಿ ಹೊರಟು ಬೀಳಗಿ ತಾಲೂಕಿನ ಸುನಗ ತಾಂಡ– 1 ರಲ್ಲಿ ಎಗ್ಗ ರೈಸ್ ಅಂಗಡಿಯ ಮುಂದೆ ಬೆಳಿಗ್ಗೆ 08–00 ಹೋದಾಗ ಸದರಿ ಅಂಗಡಿಯ ಮುಂದೆ ನಿಂತಿದ್ದ ಚಾ.ಸಾ–2 ಮತ್ತು 3 ರವರಿಗೆ ಸದರಿ ದಾಳಿ ಮಾಡು ವಿಷಯವನ್ನು ತಿಳಿಸಿ ಪಂಚರಾಗುವಂತೆ ಕೋರಿದ್ದು, ಸದರಿಯವರು ಒಪ್ಪಿಕೊಂಡಿರುತ್ತಾರೆ. ನಂತರ ನಾವೆಲ್ಲರೂ ಸೇರಿಕೊಂಡು ಮಾಹಿತಿ ಬಂದ ಆರೋಪಿ ಮನೆಯನ್ನು ಪತ್ತೆ ಹಚ್ಚಿ ಆತನ ಮನೆಯ ಮುಂದೆ ಹೋಗಿ ವಾಹನವನ್ನು ನಿಲ್ಲಿಸಿದಾಗ ನಮ್ಮ ಸಮವಸ್ತ್ರಗಳನ್ನು ನೋಡಿ ಆತನು ಓಡಿ ಹೋಗಲು ಪ್ರಯತ್ನಿಸಿದ್ದು ಸಿಬ್ಬಂದಿಗಳು ಆತನನ್ನು ತಡೆದು ನಿಲ್ಲಿಸಿರುತ್ತಾರೆ ನಂತರ ಶೋಧನಾ ವಾರಂಟನ್ನು ತಯಾರಿಸಿಕೊಂಡು ಸ್ಥಳೀಕರ ಸಮಕ್ಷಮ ಮನೆಯ ಒಳಗಡೆ ಹೋಗಿ ನೋಡಿದಾಗ ಮನೆಯಲ್ಲಿ ಯಾರೂ ಇರಲಿಲ್ಲ ಮನೆಯು ಒಂದೇ ಕೋಣೆಯದ್ದು ಆಗಿತ್ತು ಸದರಿ ಮನೆಯ ಮನೆಯ ಬಲಗಡೆ ಇರುವ ಮಾಡಿನಲ್ಲಿ ಒಂದು ಲೀ. ಬಿಸ್ಲೇರಿ ಪ್ಲಾಸ್ಟೀಕ್ ಬಾಟಲ್ ಇದ್ದು ಮತ್ತು ಅದರೊಂದಿಗೆ 2 ಸ್ಟೀಲ್ ಗ್ಲಾಸಗಳು ಇದ್ದವು. ಸದರಿ ಬಿಸ್ಲೇರಿ ಬಾಟಲನ್ನು ತೆಗೆದು ನೋಡಿದಾಗ ಅದರಿಂದ ಘಾಟು ವಾಸನೆ ಇದ್ದು ಅದರಲ್ಲಿ ಕಳ್ಳಭಟ್ಟಿ ಸಾರಾಯಿ ಎಂದು ಖಚಿತಪಡಿಸಿಕೊಂಡೆವು.

ನಂತರ ಆರೋಪಿಯನ್ನು ವಶಕ್ಕೆ ಪಡೆದುಕೊಂಡು ವಿಚಾರಿಸಲಾಗಿ ಆತನ ಹೆಸರು ಸೋಮು ಶಿವಪ್ಪ ಲಮಾಣಿ ಮತ್ತು ಸದರಿ ಕಳ್ಳಭಟ್ಟಿ ಸಾರಾಯಿಯನ್ನು ಮಾರಾಟ ಮಾಡುವ

ಸಲುವಾಗಿ ಸಂಗ್ರಹಿಸಿರುವುದಾಗಿ ಒಪ್ಪಿಕೊಂಡಿರುತ್ತಾನೆ. ನಂತರ ಪಂಚರ ಸಮಕ್ಷಮ



ಬಾಟಲಿಯಿಂದ 180 ಮೀ.ಲೀ. ನಷ್ಟು ಸ್ಯಾಂಪಲ್ ತೆಗೆದು ಸೀಲು ಮಾಡಿ ಬಿಳಿ ಬಟ್ಟೆಯಿಂದ ಸುತ್ತಿ ಕಚೇರಿ ಸೀಲು ಹಾಕಿ ಅವುಗಳ ಮೇಲೆ ನನ್ನ ಮತ್ತು ಪಂಚರ ಸಹಿ ಹಾಕಿರುತ್ತೇವೆ. ಸದರಿ ಪಂಚನಾಮೆಯನ್ನು ಚಾ.ಸಾ–4 ರವರು ಬೆಳಿಗ್ಗೆ 08–30 ರಿಂದ 09–30 ರವರೆಗೆ ಮಾಡಿ ಮುಗಿಸಿರುತ್ತಾರೆ.

ತದ ನಂತರ ಜಪ್ತು ಮಾಡಿಕೊಂಡು ಅಮಾನತ್ತು ಪಡಿಸಿಕೊಂಡ ಮುದ್ದೆ ಮಾಲುಗಳೊಂದಿಗೆ, ಆರೋಪಿಯೊಂದಿಗೆ ಮತ್ತು ಪಂಚನಾಮೆಯೊಂದಿಗೆ ವಾಪಸ್ ಠಾಣೆಗೆ ಬಂದು ಸರಕಾರದ ಪರವಾಗಿ ಆರೋಪಿತನ ಮೇಲೆ ದೂರು ಸಲ್ಲಿಸಿರುತ್ತೇನೆ. ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿ ತಯಾರಿಸಿ ಮೇಲಾಧಿಕಾರಿಗಳಿಗೆ ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ, ಉಳಿದ ಮು.ಮಾಲನ್ನು ನಮ್ಮ ತಾಬಾದಲ್ಲಿ ಇಟ್ಟುಕೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದುಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಯನ್ನು ಚಾ.ಸಾ–7 ರವರಿಗೆ ವಹಿಸಿಕೊಟ್ಟಿರುತ್ತೇನೆ.

- ಸಾಕ್ಷಿಯು ನಿಪಿ–1 ರಿಂದ 3 ಇವುಗಳನ್ನು ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಗಳನ್ನು ನಿಪಿ–1(ಬಿ), 2(ಬಿ), 3(ಬಿ) ಮತ್ತು 3(ಸಿ) ಎಂದು ಗುರುತಿಸಲಾಯಿತು.
- ದೂರನ್ನು ನಿಪಿ–4 ಎಂದು, ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು.
- ಪ್ರಥಮ ವರ್ತಮಾನ ವರದಿಯನ್ನು ನಿಪಿ–5 ಎಂದು, ಸಾಕ್ಷಿಯ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು.
- ಸ್ವತ್ತಿನ ಪಟ್ಟಿ ಪತ್ರವನ್ನು ನಿಪಿ–6 ಎಂದು, ಸಾಕ್ಷಿಯ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾಲನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ–1 ಎಂದು, ಸಾಕ್ಷಿಯ ಸಹಿಯನ್ನು ಮು.ಮಾ–1(ಎ) ಎಂದು ಗುರುತಿಸಲಾಯಿತು. ಗೈರು ಹಾಜರು ಇರುವ 1 ಮತ್ತು 2 ನೇ ಆರೋಪಿತರ ಪೈಕಿ 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ಗುರುತಿಸುವಿಕೆಯಲ್ಲಿ ಆರೋಪಿ ಪರ ವಕೀಲರದ್ದು ಯಾವುದೇ ತಕರಾರು ಇರುವುದಿಲ್ಲ.

**ಪಾಟೀ ಸವಾಲು ಶ್ರೀಃ ಎ. ವಾಯ್. ಎಮ್. 1 ಮತ್ತು 2 ನೇ ಆರೋಪಿ ಪರ ವಕೀಲರಿಂದ.**

ನಮ್ಮ ಕಚೇರಿಯಿಂದ ಸುನಗ ತಾಂಡ ಕ್ಕೆ ಹೋಗಬೇಕಾದರೆ ನ್ಯಾಯಾಲಯದ ಮುಂದೆಯಿಂದ ಹೋಗಬೇಕು ಎಂದರೆ ಸರಿ. ನ್ಯಾಯಾಲಯಾದಿಂದ ಶೋಧನಾ ಸಮುಶ್ಚಿತ ಪಡೆಯಲು ಪ್ರಯತ್ನಿಸಿರುತ್ತೀರಾ ಎಂದರೆ ಸಾಕ್ಷಿಯು ಕಾಲಾವಕಾಶ ಇರದೇ ಇರುವ ಕಾರಣ

ಪಡೆದಿಲ್ಲ ಎನ್ನುತ್ತಾರೆ. ಮಾಹಿತಿ ಬಂದಾಗ ಬೆಳಿಗ್ಗೆ 07–30 ಆಗಿತ್ತು. ಆ ಸಮಯದಲ್ಲಿ ನಾನು ಮತ್ತು ಇನ್ನೊಬ್ಬ ಸಿಬ್ಬಂದಿ ಮಾತ್ರ ಕಚೇರಿಯಲ್ಲಿ ಇದ್ದೇವು. ಗುನ್ನಾ ಸ್ಥಳಕ್ಕೆ ನಾನು, ಚಾ.ಸಾ–4, 5



ಮಾತ್ರ ಹೋಗಿರುತ್ತೇವೆ.

ನಮ್ಮ ಕಚೇರಿಯಿಂದ ಸುನಗ ತಾಂಡ–1 ಅಂತರ 12 ಕೀ. ಮೀ. ಇದೆ. ಎಗ್ಗ ರೈಸ್ ಅಂಗಡಿಯ ಮುಂದೆ 3–4 ಜನ ಇದ್ದರು. ಆರೋಪಿತನ ಮನೆಯ ಮುಂದೆ ಹೋದಾಗ ಎಷ್ಟು ಜನ ಸೇರಿದ್ದರು ಎಂದರೆ ಸಾಕ್ಷಿಯು ನಮ್ಮನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎನ್ನುತ್ತಾರೆ. ಆರೋಪಿಯು ಯಾವ ಉದ್ಯೋಗ ಮಾಡುತ್ತಾನೆ ಎಂಬುದರ ಬಗ್ಗೆ ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಆರೋಪಿತನು ಬೀಳಗಿಗೆ ಬರಬೇಕು ಎಂದು ಬಸ್ಸ ನಿಲ್ದಾಣದ ಹತ್ತಿರ ಇದ್ದಾಗ ಆತನನ್ನು ಕರೆದುಕೊಂಡು ಬಂದು ಆತನ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ದಿನಾಂಕಃ 19–06–2019 ರಂದು ನಾನು, ಚಾ.ಸಾ–4, 5 ಸೇರಿಕೊಂಡು ಸುನಗ ತಾಂಡ–1 ರಲ್ಲಿ ದಾಳಿ ಮಾಡಲು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಿನದಂದು ಘಟನಾ ಸ್ಥಳದಲ್ಲಿ ಯಾವುದೇ ಮಹಜರ ಜರುಗಿಸಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸೃಷ್ಟಿಸಿದ ದಾಖಲೆಗಳ ಆಧಾರದ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತನಿಗೂ ಹಾಗೂ ಮುದ್ದೆ ಮಾಲು 1 ಮತ್ತು 2 ವಸ್ತುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ಅಪರಾದ ಮಾಡದೇ ಇದ್ದರೂ ಠಾಣಾ ಅಂಕಿ–ಅಂಶಗಳಿಗಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ವ.ಕೇ.ಸರಿ ಅದೆ

PUSHPA BALACHANDRA HONGAL
Digitally signed by PUSHPA BALACHANDRA HONGAL
Date: 2026.04.10 14:02:30 +0530

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬೀಳಗಿ**